ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಹುದ್ದೆಗಳು

859 (1421) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಮಾಜ ಕಲ್ಯಾಣ ಇಲಾಖೆಯ ಕಛೇರಿಗಳಿಗೆ ಯಾವ ಯಾವ ಹುದ್ದೆಗಳು ಮಂಜೂರಾಗಿವೆ;

ಆ) ಈ ಪೈಕಿ ಯಾವ ಹುದ್ದೆಗಳು ಭರ್ತಿಯಾಗಿವೆ ಮತ್ತು ಯಾವ ಹುದೆಗಳು ಎಷ್ಟು ದಿನದಿಂದ ಖಾಲಿ ಇವೆ;

ಇ) ಆಡಳಿತದ ಹಿತದೃಷ್ಟಿಯಿಂದ ಖಾಲಿಯಿರುವ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಮತ್ತು ಆ) ಭಾಲ್ಕಿ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ವಿವರ ಈ ಕೆಳಗಿನಂತಿದೆ.

ಕ್ರ ಸಂ.	ಹುದ್ದೆಯ ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು	ಷರಾ
1)	ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ	01	01	–	–
2)	ಕಛೇರಿ ಅಧೀಕ್ಷಕರು	01	–	01	2003–04 ನೇ ಸಾಲಿನಿಂದ
3)	ಪ್ರಥಮ ದರ್ಜೆ ಸಹಾಯಕರು	01	–	01	2003–04 ನೇ ಸಾಲಿನಿಂದ
4)	ದ್ವಿತೀಯ ದರ್ಜೆ ಸಹಾಯಕರು	01	01	–	–
5)	ಬೆರಳಚ್ಚುಗಾರರು	01	01	–	–
6)	ವಿದ್ಯಾರ್ಥಿ ನಿಲಯ ವಾಡನ್	14	08	06	2003–04 ನೇ ಸಾಲಿನಿಂದ ಖಾಲಿ ಇದ್ದು ಈ ಹುದ್ದೆಗಳನ್ನು

					ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ತುಂಬಲು ಕ್ರಮ ಕೈಗೊಳ್ಳಲಾಗಿದೆ.
7)	ವಸತಿ / ಆಶ್ರಮ ಶಾಲಾ ಶಿಕ್ಷಕರು	22	02	20	2007-08ನೇ ಸಾಲಿನಿಂದ ಖಾಲಿ ಇದ್ದು ಹೊರ ಸಂಪನ್ಮೂಲ ಮುಖೇನ ಸೇವೆ ಪಡೆಯಲಾಗಿದೆ.
8)	ಅಡುಗೆಯವರು	30	11	19	2003-04ನೇ ಸಾಲಿನಿಂದ ಖಾಲಿ ಇದ್ದು ಹೊರ ಸಂಪನ್ಮೂಲ ಮುಖೇನ ಸೇವೆ ಪಡೆಯಲಾಗಿದೆ
9)	ಅಡುಗೆ ಸಹಾಯಕರು	19	08	11	
10)	ರಾತ್ರಿ ಕಾವಲುಗಾರರು	06	01	05	
11)	ಸಿಪಾಯಿ / ಸ್ವಚ್ಛತಾ ಸಿಬ್ಬಂದಿ	03	01	02	
	ಒಟ್ಟು	**99**	**34**	**65**	

ಇ) ಖಾಲಿ ಇರುವ 'ಸಿ' ವೃಂದದ ಹುದ್ದೆಗಳನ್ನು ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನೇರ ನೇಮಕಾತಿ ಹಾಗೂ ಮುಂಬಡ್ತಿ ಮುಖೇನ ಭರ್ತಿ ಮಾಡಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ಫಲಾನುಭವಿಗಳ ವಿವರ

860 (1141) ಶ್ರೀ ಜಾರ್ಜ್ ಕೆ.ಜೆ. (ಸರ್ವಜ್ಞನಗರ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಸರ್ವಜ್ಞ ನಗರ ವಿಧಾನ ಸಭಾ ಕ್ಷೇತ್ರಕ್ಕೆ ಎಷ್ಟು ಫಲಾನುಭವಿಗಳಿಗೆ ತರಬೇತಿ ನೀಡಲಾಗಿರುತ್ತದೆ;